**<u>ಸಾಕ್ಷಿಯನ್ನು ದಿನಾಂಕ: 12-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ವಾಟೀಸವಾಲು 2ಮತ್ತು 3ನೇ ಪ್ರತಿವಾದಿ ಪರ ವಕೀಲರಾದ ಶ್ರೀ DGT ರವರಿಂದ</u>**

**1.** ವಾದಿಗಳು ಮತ್ತು ಪ್ರತಿವಾದಿಗಳು ನನ್ನ ಸಂಬಂಧಿಕರು. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಯಾವುದೇ ಕಾಗದ ಪತ್ರಗಳನ್ನು ಓದಲು ಬರುವುದಿಲ್ಲ ಎಂದರೆ ಸರಿ, ಯಾರಾದರೂ ಓದಿ ಹೇಳಿದರೆ ಗೊತ್ತಾಗುತ್ತದೆ. ಹೊಳವನಹಳ್ಳಿ ಗ್ರಾಮದಲ್ಲಿ ನನಗೆ ಸೇರಿದ 10 ಎಕರೆ ಜಮೀನು ಇರುತ್ತದೆ. 2006 ನೇ ಸಾಲಿನಲ್ಲಿ ಹೊಳವನಹಳ್ಳಿ ಗ್ರಾಮಕ್ಕೆ ಸೇರಿದ 1 ಎಕರೆ ಜಮೀನು 50-60 ಸಾವಿರ ಬೆಲೆ ಬಾಳುತ್ತಿತ್ತು. ನಾನು ಆ ಬಗ್ಗೆ ನೊಂದಾವಣಿ ಕಚೇರಿಯಲ್ಲಿ ಮಾರುಕಟ್ಟೆ ಬೆಲೆ ಬಗ್ಗೆ ದಾಖಲೆಯನ್ನು ನೋಡಿರುವುದಿಲ್ಲ. ನಾನು ದಾಖಲೆಗೆ ಸಹಿ ಮಾಡುವಾಗ ನಮ್ಮ ಗ್ರಾಮದ ಜಮೀನಿನ 1 ಎಕರೆ ಬೆಲೆ ಜಮೀನಿಗೆ ಸಂಬಂಧಿಸಿದಂತೆ ಮಾರುಕಟ್ಟೆ ಬೆಲೆಯನ್ನು ಯಾರು ತಿಳಿಸಿರುವುದಿಲ್ಲ.

2. 2006 ನೇ ಸಾಲಿನಲ್ಲಿ ಪ್ರತಿವಾದಿ ರವರ ತಾಯಿ ಜೀವಂತ ವಿರಲಿಲ್ಲ, ಅವರು ತೀರಿಕೊಂಡು ಎಷ್ಟು ವರ್ಷಗಳಾಗಿತ್ತು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳ ತಾಯಿಯ ಅಂತಿಮ ಸಂಸ್ಕಾರಕ್ಕೆ ನಾನು ಹೋಗಿದ್ದು ದಿನಾಂಕವನ್ನು ನಾನು ಬರೆದು ಇಟ್ಟುಕೊಂಡಿರುವುದಿಲ್ಲ. ನಿಪಿ-1 ಕ್ಕೆ ನಾನು ಸಹಿ ಮಾಡಿದ ಸಂದರ್ಭದಲ್ಲಿ ಪ್ರತಿವಾದಿಗಳು ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪಹಣಿ ಪತ್ರಿಕೆಗಳನ್ನು ಇಟ್ಟುಕೊಂಡಿದ್ದರು. ನಿಪಿ-1 ರ ಸಮಯದಲ್ಲಿ ದಾವಾ ಆಸ್ತಿಗಳು ಈರಣ್ಣ, ಮಲ್ಲಯ್ಯ, ಮುದ್ದಮಲ್ಲಯ್ಯ, ನಾಗಪ್ಪ, ಲಿಂಗಪ್ಪನವರ ಹೆಸರಿನಲ್ಲಿದ್ದವು. ಸದರಿಯವರೆಲ್ಲರೂ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ. ಸುಮಾರು 30-35 ವರ್ಷಗಳಿಂದ ದಾವಾ ಆಸ್ತಿಗಳನ್ನು ನಾನು ನೋಡುತ್ತಿರುತ್ತೇನೆ. ದಾವಾ ಆಸ್ತಿಗಳು ಪ್ರತಿವಾದಿಗಳಿಗೆ ಅವರ ತಾತಂದಿರದಿಂದ ಬಂದಂತಹ ಆಸ್ತಿಗಳಾಗಿರುತ್ತವೆಂದರೆ ಸರಿ. ನಿಪಿ-1ಕ್ಕೆ ನಾನು ಸಹಿ ಮಾಡುವ ಕಾಲಕ್ಕೆ ಪ್ರತಿವಾದಿ 1 ರಿಂದ 3 ರವರ ಮಕ್ಕಳು ವಯಸ್ಕರಾಗಿರಲಿಲ್ಲ, ಆದರೆ ಮದುವೆ ಮಾಡುವ ವಯಸ್ಸಿನವರಾಗಿದ್ದರು. 2006 ನೇ ಸಾಲಿನಲ್ಲಿ 1ನೇ ಪ್ರತಿವಾದಿ ಮಗ ದೊಡ್ಡನಾಗಪ್ಪನಿಗೆ 40 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರ ಮಕ್ಕಳ ಪೈಕಿ ಕೆಲವರು ವಯಸ್ಕರಾಗಿದ್ದು ಕೆಲವರು ಅಪ್ರಾಪ್ತ ವಯಸ್ಕರಾಗಿದ್ದು ನಿಪಿ-1 ಕ್ಕೆ ಅವರೆಲ್ಲರೂ ಸಹಿಗಳನ್ನು ಮಾಡಿರುವುದಿಲ್ಲ. ಅಪ್ರಾಪ್ತ ವಯಸ್ಕ ಮಕ್ಕಳ ಪರವಾಗಿ ಪ್ರತಿವಾದಿ 1 ರಿಂದ 3 ರವರು ನಿಪಿ-1ಕ್ಕೆ ಸಹಿ ಮಾಡಿರುವುದಿಲ್ಲ.

3. ನಾನು ಬರವಣಿಗೆ ಆಗಿರುವ ಪತ್ರಕ್ಕೆ ಸಹಿ ಮಾಡಿರುತ್ತೇನೆ. ನಿಪಿ-1 ಕ್ಕೆ ಸಹಿ ಮಾಡುವ ಕಾಲಕ್ಕೆ ಸದರಿ ಪತ್ರಕ್ಕೆ ಪ್ರತಿವಾದಿ 1 ರಿಂದ 3 ರವರು, ಪಲ್ಲಣ್ಣ, ರಾಮಲಿಂಗಯ್ಯ, ಶಿವಲಿಂಗಯ್ಯ ರವರು ಸಹಿಗಳನ್ನು ಮಾಡಿದ್ದರು. ನಿಪಿ-1ಕ್ಕೆ ನಾನು ಸಹಿ ಮಾಡಿದ ನಂತರ ಅಲ್ಲಿಂದ ಹೊರಟು ಹೋಗಿರುತ್ತೇನೆ, ನಂತರ ನಿಪಿ-1 ಕ್ಕೆ ಯಾರು ಯಾರು ಸಹಿಗಳನ್ನು ಮಾಡಿರುತ್ತಾರೆಂದು ನನ್ನಿಂದ ಹೇಳಲು ಆಗುವುದಿಲ್ಲ. ನಿಪಿ-1 ಕ್ಕೆ ಸಹಿ ಮಾಡುವ ಕಾಲಕ್ಕೆ ಸದರಿ ಪತ್ರದಲ್ಲಿ ತಿದ್ದುಪಡಿಗಳಾಗಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣದಲ್ಲಿರುವ ಅಂಶಗಳನ್ನು ವಕೀಲರು ಓದಿ ಹೇಳಿದ್ದು ನಾನು ಸಹಿ ಮಾಡಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ನಾನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ. ದಾವಾ ಆಸಿತಗಳ ಅಕ್ಕಪಕ್ಕದಲ್ಲಿ ನನಗೆ ಸೇರಿದ ಜಮೀನು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಪೈಕಿ ಒಂದು ಜಮೀನಿನ ಪಕ್ಕದಲ್ಲಿ ನನಗೆ ಸೇರಿದ ಆಸ್ತಿ ಇದ್ದು, ಆ ಆಸ್ತಿಯ ಚಕ್ಕುಬಂದಿಯನ್ನು ಮಾತ್ರ ನಾನು ಹೇಳಬಲ್ಲೆ, ಉಳಿದ ಆಸ್ತಿಗಳ ಚಕ್ಕುಬಂದಿ ನನಿಂದ ಹೇಳಲಾಗುವುದಿಲ್ಲ. ಪ್ರತಿವಾದಿ 1 ರಿಂದ 3 ರವರು ಒಂದೊಯಿ ಜಮೀನಿನಕಡೆ ಒಬ್ಬೊಬ್ಬರೂ ಇದ್ದು, ಅವರು ಬೇರೆ ಆಗಿದ್ದರೋ ಇಲ್ಲವೋ ನನ್ನಿಂದ ಹೇಳಲಾಗುವುದಿಲ್ಲ.

4. ಸಿರಗೋನಹಳ್ಳಿ , ಲಕ್ಕೇನಹಳ್ಳಿ ಮತ್ತು ಹೊಳವನಹಳ್ಳಿ ಗ್ರಾಮಗಳಲ್ಲಿ ಪ್ರತಿವಾದಿ 1 ರಿಂದ 3 ರವರಿಗೆ ಸೇರಿದ ಆಸ್ತಿಗಳು ಇರುತ್ತವೆ ಎಂದರೆ ಸರಿ. ಲಕ್ಕೇನಹಳ್ಳಿ ಗ್ರಾಮದಲ್ಲಿ ಇರುವ ಜಮೀನುಗಳಲ್ಲಿ 1ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದರೆ , ಎಲ್ಲಾ ಜಮೀನುಗಳಲ್ಲಿ ಎಲ್ಲರೂ ಸ್ವಲ್ಪ ಸ್ವಲ್ಪ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆ. ಸಿರೆಗೋನಹಳ್ಳಿ ಗ್ರಾಮದ ಆಸ್ತಿಗಳು 2 ಪ್ರತಿವಾದಿ ಭಾಗಕ್ಕೆ ಹೋಗಿದ್ದು ಅವರೇ ಸ್ವಾಧೀನಲ್ಲಿರುತ್ತಾರೆಂದರೆ, 3 ಜನರೂ ಸ್ವಾಧೀನದಲ್ಲಿರುತ್ತಾರೆ. ಹೊಳವನಹಳ್ಳಿ ಗ್ರಾಮದಲ್ಲಿನ ಆಸ್ತಿಗಳು 3ನೇ ಪ್ರತಿವಾದಿ ಭಾಗಕ್ಕೆ ಹೋಗಿದ್ದು ಅವರೇ ಸ್ವಾಧೀನದಲ್ಲಿ ಇರುತ್ತಾರೆಂದರೆ 3 ಜನರು ಇರುತ್ತಾರೆ. ದಾವಾ ಆಸ್ತಿಗಳು 3 ನೇ ಪ್ರತಿವಾದಿ ಸಿದ್ದರಾಜು ರವರ ಹೆಸರಿಗೆ ಹೋಗಿದ್ದು , ಸದರಿ ಆಸ್ತಿಗಳಲ್ಲಿ 1 ಮತ್ತು 2 ಗಳಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಆ ಕಾರಣ 1 ಮತ್ತು 2 ನೇ ಪ್ರತಿವಾದಿಗಳಿಗೆ ಯಾವುದೇ ಪತ್ರವನ್ನು ಬರೆದುಕೊಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ 3 ನೇ ಪ್ರತಿವಾದಿ ಮತ್ತು ಅವರ ಅಳಿಯ ವೆಂಕಟೇಶ್ ರವರು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

5. ನಿಪಿ-1 ನ್ನು ಬರೆಯುವ ಮೊದಲು ಜಮೀನಿನ ವ್ಯವಹಾರವನ್ನು ನಮ್ಮ ಗ್ರಾಮದಲ್ಲಿ ನನ್ನ ಸಮಕ್ಷಮದಲ್ಲಿ ಮಾತನಾಡಿಕೊಂಡಿದ್ದರು. ಆ ಸಮಯದಲ್ಲಿ ನಾನು ಪ್ರತಿವಾದಿ 1 ರಿಂದ 3, ಪಲ್ಲಣ್ಣ, ರಾಮಲಿಂಗಯ್ಯ, ನಾಗರಾಜು

ಮೇಸ್ತ್ರು ಮತ್ತು ಅವರ ಒಬ್ಬ ಮಗ ಇದ್ದು ಅವರ ಹೆಸರು ನನ್ನಿಂದ ಹೇಳಲಾಗುವುದಿಲ್ಲ. ನಾಗರಾಜು ಮೇಸ್ತ್ರುರವರ ಮಕ್ಕಳ ಹೆಸರು ನನಗೆ ಗೊತ್ತು. ಮಾತುಕತೆಯು ನಾಗರಾಜು ಮೇಸ್ತ್ರುರವರ ಮನೆಯ ಬಳಿ ಆಗಿದ್ದು, ಆ ದಿವಸವೇ ಒಟ್ಟು ಮೊತ್ತವನ್ನು ನಾಗರಾಜು ಮೇಸ್ತ್ರು ರವರು 1 ನೇ ಪ್ರತಿವಾದಿಗೆ ನೀಡಿರುತ್ತಾರೆ. ಆ ಸಮಯದಲ್ಲಿ ನಾನು ಅಲ್ಲಿಯೇ ಇದ್ದೆ. ನಾಗರಾಜು ಮೇಸ್ತ್ರುರವರು 1ನೇ ಪ್ರತಿವಾದಿಗೆ 500 ಮತ್ತು 1000 ರೂ. ಮುಖಬೆಲೆಯ ನೋಟುಗಳನ್ನು ನೀಡಿರುತ್ತಾರೆ. ದಾವಾ ಆಸ್ತಿಗಳು 1ನೇ ಪ್ರತಿವಾದಿಯ ತಂದೆ ಹಾಗೂ ಅವರ ಸಹೋದರರ ಹೆಸರಿನಲ್ಲಿದ್ದು 1 ನೇ ಪ್ರತಿವಾದಿಯ ಹೇಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡ ನಂತರ ಕ್ರಯಪತ್ರ ಬರೆದುಕೊಡುತ್ತೇನೆಂದು ಮಾತುಕತೆ ಆಗಿದೆ. ಆ ರೀತಿ ಹಣವನ್ನು ನೀಡಿದ 2 ವರ್ಷಗಳಾದ ನಂತರ ನಾನು ಮತ್ತು ಸಾಕ್ಷಿದಾರರು ಸೇರಿ 1ನೇ ಪ್ರತಿವಾದಿಯನ್ನು ಕೇಳಿದ್ದು , ದಾವಾ ಆಸ್ತಿಗಳ ಸ್ವಾಧೀನವನ್ನು ನಾಗರಾಜು ಮೇಸ್ತ್ರು ಮತ್ತು ಅವರ ಮಕ್ಕಳ ಸ್ವಾಧೀನಕ್ಕೆ ಬಿಟ್ಟು ಕೊಟ್ಟಿರುತ್ತಾರೆ. ನಾನು ಹಣ ಕೊಟ್ಟ ನಂತರ ಕರಾರು ಪತ್ರಕ್ಕೆ ಬಿಟ್ಟು ಬೇರೆ ಯಾವುದೇ ದಾಖಲೆಗಳಿಗೆ ಸಹಿಯನ್ನು ಮಾಡಿರುವುದಿಲ್ಲ. ಹಣ ನೀಡಿದ ದಿನಾಂಕದಂದೇ ನಾನು ಪತ್ರಕ್ಕೆ ಸಹಿ ಮಾಡಿರುತ್ತೇನೆ. ದಾವಾ ಆಸ್ತಿಗಳ ಸ್ವಾಧೀನವನ್ನು ವಾದಿಗಳಿಗೆ ಬಿಟ್ಟುಕೊಟ್ಟ ಬಗ್ಗೆ ಪತ್ರ ಬರವಣಿಗೆ ಆಗಿರುತ್ತದೋ ಇಲ್ಲವೋ ನನಗೆ ನೆನಪಿಲ್ಲ. ದಾವಾ ಆಸ್ತಿ ಬಗ್ಗೆ ನನಗೆ ಏನು ಗೊತ್ತಿಲ್ಲದೇ ಇದ್ದರೂ ವಾದಿಗಳು ನನ್ನ ಸಂಬಂದಿಕರಾದ ಕಾರಣ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2006ನೇ ಇಸವಿಯಲ್ಲಿ ದಾವಾ ಆಸ್ತಿಗಳ ಬೆಲೆ 30 ರಿಂದ 35 ಲಕ್ಷ ಇದ್ದು ನಾನು ಮತ್ತು ಇತರ ಸಾಕ್ಷಿದಾರರು ಹಾಗೂ ವಾದಿಗಳು ಮತ್ತು 1ನೇ ಪ್ರತಿವಾದಿ ಸೇರಿಕೊಂಡು ಕಡಿಮೆ ಮೊತ್ತವನ್ನು ಸೇರಿಸಿ ನಿಪಿ-1 ನ್ನು ಸೃಷ್ಠಿ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ನಾಗರಾಜು ಮೇಸ್ತ್ರು ಮತ್ತು 1ನೇ ಪ್ರತಿವಾದಿ ವಿಶ್ವಾಸದಿಂದ ಇದ್ದು, 2ನೇ ಮತ್ತು 3ನೇ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಾಗರಾಜು ಮೇಸ್ತ್ರು ಮತ್ತು 1ನೇ ಪ್ರತಿವಾದಿ ಹಾಗೂ ನಾನು ಮತ್ತು ಇತರ ಸಾಕ್ಷಿದಾರರು ಸೇರಿಕೊಂಡು ನಿಪಿ-1 ನ್ನು ಸೃಷ್ಠಿಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ನಾಗರಾಜು ಮೇಸ್ತ್ರು ಯಾವುದೇ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ಪ್ರತಿವಾದಿಗಳು ವಿಭಾಗ ಮಾಡಿಕೊಳ್ಳುವ ಸಲುವಾಗಿ ಅವರ ನಡುವೆ ದ್ವೇಷ ಬೆಳೆದಿದ್ದು 1ನೇ ಪ್ರತಿವಾದಿ 2 ಮತ್ತು 3ನೇ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ 1ನೇ ಪ್ರತಿವಾದಿ ನಾಗರಾಜು ಮೇಸ್ತ್ರು ರವರ ಜೊತೆ ಸೇರಿ ನಿಪಿ-1 ನ್ನು ಸೃಷ್ಠಿ ಮಾಡಿಕೊಂಡಿರುತ್ತಾರೆಂದರೆ ಸರಿಯಲ್ಲ. 2 ಮತ್ತು ಮತ್ತು 3ನೇ ಪ್ರತಿವಾದಿಗಳು ಯಾವುದೇ ಕರಾರು ಪತ್ರವನ್ನು ವಾದಿಗಳಿಗೆ ಬರೆದು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಎಸ್. ನಂ. 277/2014

ಪಿ ಡಬ್ಲ್ಯೂ -3

**ಓ. ಹೇ.ಕೇ.ಸರಿ ಇದೆ.**

**Sd/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**